SN – 089

NEW HORIZON COLLEGE LIBRARY

# ಮೂರನೇ ಸೆಮಿಸ್ಟರ್ ಬಿ.ಸಿ.ಎ. ಪರೀಕ್ಷೆ, ನವೆಂಬರ್/ಡಿಸೆಂಬರ್ 2013
## (Freshers+Repeaters) (2012-13 and Onwards)
## ಕನ್ನಡ ಭಾಷಾ ಪತ್ರಿಕೆ – III
## ಸಾಹಿತ್ಯ ಸಲ್ಲಾಪ – ೨

Time : 3 Hours Max. Marks : 100

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : **(1×5=5)**

1) 'ಪಂಚೇಂದ್ರಿಯಂಗಳೊಳು ನಾಲ್ಕಧಮವೊಂದಧಿಕವೇ ಎಂದರು' – ಈ ಸಾಲನ್ನು ಹೊಸಗನ್ನಡದಲ್ಲಿ ಬರೆಯಿರಿ.

2) 'ಬಳ್ಳಿಯ ಬೆಳವಣಿಗೆಗೆ ಗಿಡಮರಗಳು ಆಶ್ರಯವನ್ನು ಕೊಡುತ್ತದೆ' – ಇಲ್ಲಿಯ ವಚನದೋಷವನ್ನು ಸರಿಪಡಿಸಿ.

3) ಏಳಲು ಹಿಂದೆ ಮುಂದೆ ನೋಡಿದಳು – ಈ ವಾಕ್ಯದ ಲಿಂಗ ಬದಲಿಸಿ ಬರೆಯಿರಿ.

4) ಗುಂಪಿನಲ್ಲಿ ಒಬ್ಬ ಎದ್ದು ನಿಲ್ಲುತ್ತಾನೆ – ಈ ವಾಕ್ಯದಲ್ಲಿಯ 'ಗುಂಪಿನಲ್ಲಿ' ಪದದ ವಿಭಕ್ತಿ ಪ್ರತ್ಯಯ ಬದಲಿಸಿ ಬರೆಯಿರಿ.

5) ಬಾಗಿಲು ತೆರೆದು ಬರುತ್ತಾನೆ – ಈ ವಾಕ್ಯವನ್ನು ವರ್ತಮಾನಕಾಲಕ್ಕೆ ಬದಲಿಸಿ ಬರೆಯಿರಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : **(1×5=5)**

1) ಶಾರದತ್ತಿಗೆ ಬರುತ್ತಾರೆಂತ ಖುಷಿಯಾಗಿದೆಯಲ್ಲವೆ ? – ಈ ವಾಕ್ಯವನ್ನು ಹೇಳಿಕೆಯಾಗಿ ಬರೆಯಿರಿ.

2) ಇಂದು ಅವಿಭಕ್ತ ಕುಟುಂಬಗಳು ಮರೆಯಾಗುತ್ತಿವೆ. – ಈ ವಾಕ್ಯವನ್ನು ಪ್ರಶ್ನೆಯಾಗಿ ಪರಿವರ್ತಿಸಿ.

3) ತಾಯಿಯಂತೆ ಉಣಿಸಿ ಬಾಯಿ ಒರೆಸಿ ಮಲಗಿಸಿದಳು – ಈ ವಾಕ್ಯವನ್ನು ಎರಡು ವಾಕ್ಯಗಳಾಗಿ ಬರೆಯಿರಿ.

4) ಪರಶುರಾಮನೇ ನಮ್ಮ ಮೇಲೆ ಬಿದ್ದ. ನಮ್ಮಗಳ ರಕ್ಷಣೆಗೋಸ್ಕರ ಅವನ್ನ ನಾವೇ ಹೊಡೆದು ಓಡಿಸಿದೆವು. – ಈ ವಾಕ್ಯಗಳನ್ನು ಒಂದೇ ವಾಕ್ಯವಾಗಿ ಬರೆಯಿರಿ.

5) ಅಂತೂ ಮುಂಡೇವ್ಕೆ ಕೊನೆಗೂ ಸ್ವಾತಂತ್ರ್ಯ ಸಿಕ್ತು ರಾಮರಾಮ – ಸೂಕ್ತವಾದ ಲೇಖನ ಚಿಹ್ನೆಗಳನ್ನು ಬರೆಯಿರಿ.

III. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : **(1×5=5)**

1) 'ಜೊಲ್ಲುಸುರಿಸು' ಈ ನುಡಿಗಟ್ಟನ್ನು ಬಳಸಿ ಒಂದು ವಾಕ್ಯ ರಚಿಸಿ.

2) ಹಾಗೆ ನೋಡಿದರೆ <u>ನರ್ಸ್</u> ನೋಡಿಕೊಂಡಷ್ಟು <u>ಕ್ಲೀನಾಗಿ</u> ಮನೆಯವರು ನೋಡಿಕೊಳ್ಳುತ್ತಾರೆಯೇ ? – ಈ ಬಗೆಯ ನುಡಿಬೆರಕೆ ವಾಕ್ಯ ರಚಿಸಿ.

3) 'ಕೆಂಡದಂಥ ಕೋಪ'– ಈ ಉಪಮೆಯನ್ನು ಬಳಸಿ ಒಂದು ವಾಕ್ಯ ರಚಿಸಿ.

4) 'ಹೂನಗೆ' – ಈ ರೂಪಕವನ್ನು ಬಳಸಿ ಒಂದು ವಾಕ್ಯ ರಚಿಸಿ.

5) 'ಮದ್ಯಪಾನ ಮೃತ್ಯುವಿಗೆ ಆಹ್ವಾನ' – ಇದೇ ರೀತಿಯ ಒಂದು ಘೋಷವಾಕ್ಯವನ್ನು ಬರೆಯಿರಿ.

IV. ಈ ಪದ್ಯಭಾಗದ ಅರ್ಥ ಬರೆಯಿರಿ : **(5×1=5)**

ಬಂದೆಹೆನೆಂಬ ಸುಖವ ಹೆರಹಿಂಗಿದವರುಂಟೆ ?
ಕಂಡ ನಿಧಾನದ ನಡೆ ಎಂದವರುಂಟೆ ?
ಸುಖಕ್ಕೆ ಸುಖ ಒದಗಿದರೆ ಒಲ್ಲೆನೆಂದವರುಂಟೆ ?
ಕಲಿದೇವಯ್ಯ ಬಂದೆಹೆನೆಂದಡೆ ಬೇಡವೆನಲೇಕೆ ಚಂದಯ್ಯ ?

V. **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ : **(6×2=12)**

ಷಟ್ಪದಿ, ಪ್ರಜಾಪ್ರಭುತ್ವ ಮತ್ತು ಮೂರು ಮಂಗಗಳು, ಬೆಲ್ಚಿ, ನಗು.

VI. ಈ ಪ್ರಶ್ನೆಗಳಿಗೆ **ಇಪ್ಪತ್ತು** ಸಾಲುಗಳಿಗೆ ಮೀರದಂತೆ ಉತ್ತರಿಸಿರಿ : **(5×4=20)**

1) ಇಂದ್ರಿಯಾನುಭವವನ್ನು ಕುರಿತು 'ಪಂಚೇಂದ್ರಿಯಂಗಳೊಳ್...' ಪದ್ಯದಲ್ಲಿ ಏನೆಂದು ಹೇಳಲಾಗಿದೆ ?

**ಅಥವಾ**

ನುಲಿಯ ಚಂದಯ್ಯನ ಭಕ್ತಿಯನ್ನು ಕುರಿತು ಬರೆಯಿರಿ.

2) ಮಾಬಲ ಮಂದಕ್ಕನನ್ನು ಕುರಿತು ಹೇಳಿದ ಮಾತುಗಳಾವುವು ?

**ಅಥವಾ**

ಪೋಲೀಸ್‌ಠಾಣೆಯ ಮುಂದೆ ಜನ ಸೇರಲು ಕಾರಣವೇನು ?

3) ದಲಿತರ ಮೇಲಿನ ದೌರ್ಜನ್ಯವನ್ನು ಖಂಡಿಸಿ ಒಂದು ಲೇಖನವನ್ನು ಬರೆಯಿರಿ.

**ಅಥವಾ**

'ಬೆಲ್ಚಿ' ಹತ್ಯಾಕಾಂಡವನ್ನು ಕುರಿತು ಬರೆಯಿರಿ.

4) ಗುಡುಗು ಸಿಡಿಲಿನ ಬಗ್ಗೆ ಆದಿಮಾನವನ ಕಲ್ಪನೆ ಏನು ?

**ಅಥವಾ**

ವಿಜ್ಞಾನದಿಂದ ಮಹಿಳೆಯನ್ನು ದೂರವಿಡಲು ಕಾರಣವೇನು ?

VII. ಈ ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ : (12×4=48)

1) ಗಾನರಾಣಿಯರು ಹರಿಶ್ಚಂದ್ರನಿತ್ತ ಒಡವೆಗಳನ್ನು ನಿರಾಕರಿಸಲು ಕಾರಣವೇನು ?

**ಅಥವಾ**

ಕವಯಿತ್ರಿ ಚಾವುಂಡವ್ವನನ್ನು 'ಇಳಿದು ಬಾ' ಎಂದು ಕರೆಯಲು ಕಾರಣವೇನು ?

2) ಜಗತ್ತು ಇಷ್ಟೊಂದು ರೋಗಗ್ರಸ್ತವೆಂದು ಪುಟ್ಟು ಯೋಚಿಸಲು ಕಾರಣವೇನು ?

**ಅಥವಾ**

ನ್ಯಾಯಪರಿಪಾಲನೆಯ ಮುಖವಾದ ಪೋಲೀಸ್ ಮತ್ತು ಸಮಾಜ ಪ್ರಜ್ಞೆಯ ನೆಲೆಯಾದ ಕೋತಿ ಆಡಿಸುವವನು ಮುಖಾಮುಖಿಯಾದ ಹಿನ್ನೆಲೆಯನ್ನು ವಿವರಿಸಿ.

3) ಆರ್ಥಿಕ ಅಸ್ಪೃಶ್ಯತೆ ಹಾಗೂ ಜಾತೀಯ ಅಸ್ಪೃಶ್ಯತೆಗಳ ಹಿನ್ನೆಲೆಯಲ್ಲಿ 'ಬೆಲ್ಚಿ' ನಾಟಕವನ್ನು ವಿವರಿಸಿ.

**ಅಥವಾ**

'ಜನರೇ ದೈವವಾಗಿ ಎದ್ದು ನಿಲ್ಲಬೇಕು' – ಎಂಬ ಸಿದ್ಧಲಿಂಗಯ್ಯನವರ ಮಾತನ್ನು ನಾಟಕದ ಹಿನ್ನೆಲೆಯಲ್ಲಿ ವಿವರಿಸಿ.

4) ''ವಿಜ್ಞಾನದ ಆವಿಷ್ಕಾರಗಳು ಮಹಿಳಾ ಶೋಷಣೆಯ ಅಸ್ತ್ರವಾಗಿವೆ''. ವಿವರಿಸಿ.

**ಅಥವಾ**

ಮನುಷ್ಯನು ಮೌಢ್ಯದ ಸಂಕೋಲೆಯಿಂದ ಪಾರಾಗಲು ವೈಜ್ಞಾನಿಕ ತಿಳುವಳಿಕೆಯ ಅಗತ್ಯವಿದೆಯೆಂಬುದನ್ನು ವಿವರಿಸಿ.

---